ಮೇಘ ದೇಹದ ಕೆಂಪು ಕಣ್ಣಿನ ಸೂರ್ಯ ಚಂದ್ರರ
ಹೋಲ್ವ ಮೊಗದವನು
ನಾರಾಯಣನೇ ನನಗೆ ಇಷ್ಟಾರ್ಥವನು ತರುವ
ಜಗಹೊಗಳೆ ವ್ರತವ ಕೈಗೊಳ್ಳೆ ನಮ್ಮೀ ಪವಿತ್ರ
ವ್ರತವೂ ಸಾರ್ಥಕವು

(*ಬಿಂದಿಗನವಲೆ ನಾರಾಯಣ ಸ್ವಾಮಿಯವರ ರಚನೆ – ತಿರುಪ್ಪಾವೈ ಮೊದಲ ಪಾಶುರ ಅನುವಾದ)

ತಕ್ಷಣ ಆ ಪರಿಸರ ಆನಂದಮಯವಾಯಿತು. ಆ ಪದಗಳ ಏರಿಳಿತಗಳ ಮೂಲಕ ಅಲೆಯಲೆಯಾಗಿ ಹರ್ಷ ಹರಡಿತು. ಪೆರಿಯಾಳ್ವಾರ್ ಕಣ್ಣಲ್ಲಿ ನೀರು ಹನಿಯಿತು. ಪಕ್ಕದಲ್ಲಿ ನಿಂತಿದ್ದ ಆಂಡಾಳನ್ನು ಸಮೀಪಿಸಿ, "ಆಂಡಾಳ್ ಅದ್ಭುತವಾಗಿ ಬರೆದಿರುವೆ ತಾಯಿ" ಎಂದರು ಹೆಮ್ಮೆ ಹೊರಹೊಮ್ಮುವ ದನಿಯಲ್ಲಿ. ಮುಂದುವರೆಸುತ್ತಾ, "ಈ ತಂದೆಯನ್ನೇ ಮೀರಿಬಿಟ್ಟೆ ಮಗಳೇ" ಎಂದರು. "ಅಯ್ಯೋ, ಅಪ್ಪ ಹಾಗೆ ಹೇಳಬೇಡಿ" ಎಂದಳು. ಆಂಡಾಳ್, ಆತುರದಿಂದ ಅವರ ಬಾಯನ್ನು ಮುಚ್ಚಿದಳು.

"ಗುರುವೇ" ಎಂದಿತು ಶಿಷ್ಯನ ದನಿ. "ಎರಡನೇಯ ಬುಟ್ಟಿಯೂ ತುಂಬಿತು."

ಕನಸಿನಿಂದ ಎಚ್ಚೆತ್ತುಕೊಂಡವರಂತೆ ಪೆರಿಯಾಳ್ವಾರ್, "ಒಳ್ಳೆಯದು ಹೋಗು, ಆಂಡಾಳ್‌ನ ಬಳಿ ಕೊಟ್ಟು ಬಾ" ಎಂದರು.


"ಗುರುವೇ" ಎಂದನು ಶಿಷ್ಯ.

ಪೆರಿಯಾಳ್ವಾರ್, "ಏನು?" ಎಂದು ತಲೆ ಎತ್ತಿದರು.

"ನಿಮ್ಮ ಬುಟ್ಟಿಯೂ ತುಂಬಿಹೋಗಿದೆ. ಬುಟ್ಟಿ ತುಂಬಿ ಹೂಗಳು ಕೆಳಗೆ ಬೀಳುತ್ತಿವೆ."

ಆಗಲೇ ಸಂಪೂರ್ಣವಾಗಿ ಎಚ್ಚೆತ್ತುಕೊಂಡರು ಪೆರಿಯಾಳ್ವಾರ್. ಬುಟ್ಟಿಯನ್ನು ನೋಡಿದರು. ಬುಟ್ಟಿ ತುಂಬಿ ಮತ್ತೊಂದು ಬುಟ್ಟಿ ತುಂಬುವಷ್ಟು ಹೂಗಳು ಕೆಳಗೆ ಬಿದ್ದಿದ್ದವು. ಪೆರಿಯಾಳ್ವಾರ್, ಶಿಷ್ಯನನ್ನು ಒಂದರೆಗಳಿಗೆ ತಲೆ ಎತ್ತಿ ನೋಡಿದರು. ಮರುಕ್ಷಣ ಅವನ ನೋಟವನ್ನು ತಪ್ಪಿಸುವಂತೆ, "ಸರಿ, ಬಾ ಹೋಗೋಣ" ಎಂದು ಕುಟೀರದ ಕಡೆಗೆ ನಡೆದರು.

ಬೆಳಗಾಗಲು ತೊಡಗಿತು. ದೂರದಲ್ಲಿ ತಲೆ ಎತ್ತಿ ನಿಂತಿರುವ ಗೋಪುರ ಕಂಡಿತು. ಬೀದಿಯೆಲ್ಲ ಹೊಸಿಲಿಗೆ ನೀರೆರೆಚುವ ಶಬ್ದ. ಹಸುಗಳು ಓಡಾಡುವ ಶಬ್ದ. ದನಗಳ ಕೊರಳ ಮಣಿಗಳ ಶಬ್ದ. ಹಸುಗಳ ಜತೆ ಮಕ್ಕಳು ಆಟವಾಡುವ ಶಬ್ದ. ರಂಗೋಲಿ ಹಾಕುವ ಹೆಂಗಸರ ಕೈಬಳೆಗಳ ಶಬ್ದ. ಮರದ ಮರೆಯಲ್ಲಿ ನಿಂತುಕೊಂಡು ರಂಗೋಲಿ ಹಾಕುವ ಯುವತಿಯರನ್ನು ಕರೆಯುವ ಯುವಕರು ಎಬ್ಬಿಸುವ ವಿಚಿತ್ರವಾದ ಶಬ್ದ. ದಾರಿಯಲ್ಲಿ ನಡೆದು ಹೋಗುವವರು ಪೆರಿಯಾಳ್ವಾರ್ ಬರುವುದನ್ನು ನೋಡಿ ಜರುಗಿ ದಾರಿಬಿಟ್ಟು ನಿಂತರು.



ಆಂಡಾಳಿನ ಮಾತುಗಳನ್ನು ಮತ್ತೆ ಮೆಲುಕುಹಾಕಿತು ಅವರ ಮನಸ್ಸು. ರಂಗೋಲಿ ಹಾಕಿಕೊಂಡು ಹೂಗಳನ್ನು ಕಟ್ಟುತ್ತಾ, ದನಕರುಗಳನ್ನು ನೋಡಿಕೊಂಡು ಜೀವಿಸುವ ಸರಳವಾದ ಹೆಣ್ಣುಮಗಳಲ್ಲ ಇವಳು. ಇನ್ನು ಉಳಿದ ಹೆಣ್ಣುಗಳಂತೆ ಸಂಸಾರದ ಬದುಕು ಅವಳಿಗೆ ಇರುವುದಿಲ್ಲ. ಹಾಗೆ ಅಂದುಕೊಂಡಾಗ ಅವರ ಮನಸ್ಸು ಒಡೆದುಹೋಗುವಂತ್ತಿತ್ತು. ಅವರ ಕನಸು ಬೇರೆಯದೇ ರೀತಿಯಲ್ಲಿತ್ತು. ಮಗಳು ಮೊಮ್ಮಗನನ್ನು ಹೆತ್ತು ಕೊಡುತ್ತಾಳೆ. ಮೊಮ್ಮಗನಿಗೆ ಮಾಧವನ ಹಾಡುಗಳನ್ನು ಹೇಳಿಕೊಡುತ್ತಾ ಕಾಲವನ್ನು ಕಳೆಯಬಹುದು. ಅದೃಷ್ಟವಿದ್ದರೆ ಅವನ ಮಕ್ಕಳಿಗೂ ವೆಂಕಟನ ಹಾಡುಗಳನ್ನು ಕಲಿಸಬಹುದು ಎಂದೆಲ್ಲಾ ಅಂದುಕೊಂಡಿದ್ದರು. ಅದಕ್ಕೆಲ್ಲಾ ಅವಕಾಶವಿಲ್ಲ ಎಂದು ಆ ಕನಸುಗಳನ್ನು ಮನಸ್ಸಿನೊಳಗೆಯೇ ಚಿವುಟಿ ಹಾಕಿದರು. ಅವರ ದೇಹ ಬೆವರಿತು.

ಕುಟೀರವನ್ನು ತಲುಪಿದಕೂಡಲೇ ಆಂಡಾಳ್ ಮಾಲೆಯೊಂದಿಗೆ ತಯಾರಾಗಿದ್ದಳು. ಪೆರಿಯಾಳ್ವಾರ್ ಅವಳ ಮುಖವನ್ನು ಮೊದಲ ಸಲ ನೋಡುವಂತೆ ನೋಡಿದರು. ಎಷ್ಟು ಆನಂದ? ಎಷ್ಟು ಚುರುಕು?

ಆಂಡಾಳ್, ಪೆರಿಯಾಳ್ವಾರ್, ಶಿಷ್ಯ, ಈ ಮೂವರು ಆಲಯದ ಕಡೆಗೆ ನಡೆದರು. ಏನೋ ಸಂಶಯ ಪೆರಿಯಾಳ್ವಾರನ್ನು ನರಳಿಸಿತು. ಹೇಗೆ ಕೇಳುವುದೆಂದು ಹಿಂಜರಿದರು. ತಕ್ಷಣ ಶಿಷ್ಯನ ಕಡೆಗೆ ತಿರುಗಿ, "ಆ ಬುಟ್ಟಿಯನ್ನು ನನಗೆ ಕೊಡು. ಹನುಮನಿಗೆ ಮತ್ತೊಂದು ಬುಟ್ಟಿ ಹೂ ಬೇಕಲ್ಲಾ, ಓಡು, ಹೋಗಿ ಕುಯ್ದುಕೊಂಡು ಬಾ" ಎಂದು ಅಟ್ಟಿಸಿದರು. ಶಿಷ್ಯ, ಏನೂ ಅರ್ಥವಾಗದೆ ಹಿಂತಿರುಗಿ